# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಬೈರಾರೆಡ್ಡಿ | ಪ್ರಾಸಾಃ | 03 |
| **ತಂದೆಯ ಹೆಸರುಃ** | ವೆಂಕಟರಾಯಪ್ಪ | ಚಾಸಾಃ | 03 |
| **ವಯಸ್ಸುಃ** | 70 | ಪ್ರಮಾಣ ವಚನ ಭೋದಿಸಿದ ದಿನಾಂಕ | 19.07.2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ವೈಗುಲ್ಲಾ ಹಳ್ಳಿ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ *2* ನೇ ಆರೋಪಿ ಗೊತ್ತು. ಚಾಸಾ-*1* ಮತ್ತು ಚಾಸಾ-*2* ನನಗೆ ಗೊತ್ತು. ಈಗ್ಗೆ *2* ವರ್ಷದ ಹಿಂದೆ ಬೆಳಿಗ್ಗೆ *09.30* ಸುಮಾರಿಗೆ ನಮ್ಮ ಊರಿನ ಸೀನಪ್ಪನಿಗೆ ಸೇರಿದ ಅಂಗಡಿಯಲ್ಲಿ ಚಾಸಾ-*1* ವ್ಯಾಪಾರ ಮಾಡುತ್ತಿದ್ದ. ಆ ಸಮಯಕ್ಕೆ ಬಜಾರ್ ಕಡೆಯಿಂದ ಆರೋಪಿತರು ಕೈಯಲ್ಲಿ ಕಟ್ಟಿಗೆ , ಚಾಕು ಮತ್ತು ಮಚ್ಚಿನಿಂದ ಚಾಸಾ-*1* ರವರ ಮೇಲೆ ಹಲ್ಲೆ ಮಾಡಿ ಹೊರಟು ಹೋದರು. ಚಾಸಾ-*1* ರವರು ತಲೆ, ಕೈ ಹಾಗೂ ದೇಹದ ಇತರ ಭಾಗಗಳ ಮೇಲೆ ರಕ್ತ ಗಾಯವಾಗಿತ್ತು. ಎಲ್ಲಾ ಆರೋಪಿತರು ಒಳಗಡೆ ನುಗ್ಗಿ ಅಂಗಡಿಯ ರೋಲಿಂಗ್ ಶಾಟರ್ ಬಂದು ಮಾಡಿ ಹಲ್ಲೆ ಮಾಡಿದರು. ಆ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿರುವ ಆರೋಪಿತರೇ ಆಗಿದ್ದಾರೆ. ಆ ದಿನ ಆರೋಪಿತರು ಹಲ್ಲೆ ಮಾಡಲು ಬಳಸಿದ ಆಯುಧಗಳನ್ನು ನಾನು ಈಗ ನೋಡುತ್ತಿದ್ದು ಅದನ್ನು ಮು.ಮಾ.*01* ಮತ್ತು *2* ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಸ್ಥಳ ಮಹಜರ್ ಜರುಗಿಸಿದ್ದು ಆಗ ನಾನು ಸಹ ಪಂಚನಾಗಿ ಸಹಿ ಮಾಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-2 ಎಂದು , ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಗಳನ್ನು ಹಾಗೂ ಮಚ್ಚು, ಲಾಂಗ್, ಚಾಕು, 2 ದೊಣ್ಣೆ ಇವುಗಳನ್ನು ಅಮಾನತುಪಡಿಸಿಕೊಂಡರು. ರಕ್ತದ ಮಾರಿಗಳನ್ನು ಮು.ಮಾ.06 ಮತ್ತು ಮು.ಮಾ.07 ಎಂದು ಗುರುತಿಸಲಾಯಿತು. ಮಚ್ಚು , ಚಾಕು ಹಾಗೂ ದೊಣ್ಣೆಗಳನ್ನು ಈಗಾಗಲೇ ಮು.ಮಾ.01 ರಿಂದ ಮು.ಮಾ.4 ಎಂದು ಗುರುತಿಸಲಾಗಿದೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಬಿ.ಆರ್.ಎಸ್ ವಕೀಲರು ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 19.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.